


بسم اللهِ الرّحمٰن الرّحيم

# ಖುರ್‌ಆನಿನ ಮಹತ್ವ ಮತ್ತು ಪ್ರಾಧಾನ್ಯತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **‘ಮಸ್ಜಿದ್ ಮುಬಾರಕ್’** ನಿಂದ **17–03–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕಳೆದ ಕೆಲವು ವಾರಗಳಿಂದ ಪವಿತ್ರ ಖುರ್‌ಆನಿನ ಸ್ಥಾನಮಾನ ಮತ್ತು ಸೌಂದರ್ಯಗಳ ಬಗ್ಗೆ ವಿವರಿಸಲಾಗುತ್ತಿದೆ. ಪವಿತ್ರ ಖುರ್‌ಆನಿನ ಪ್ರಕಾರ ಧರ್ಮದ ಕೆಲಸವೇನು ಮತ್ತು ಮನುಷ್ಯನ ಶಕ್ತಿಯ ಮೇಲೆ ಅದರ ನಿಯಂತ್ರಣ ಮತ್ತು ಸ್ವಾಧೀನ ಏನಾಗಿದೆ ಮತ್ತು ಏನಾಗಿರಬೇಕು? ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇಂಜೀಲ್ ಇದಕ್ಕೆ ಉತ್ತರ ನೀಡುವುದಿಲ್ಲ. ಏಕೆಂದರೆ ಇಂಜೀಲ್ ವಿವೇಕದ ಮಾರ್ಗಗಳಿಂದ ಬಲು ದೂರವಿದೆ. ಆದರೆ ಪವಿತ್ರ ಖುರ್‌ಆನ್ ಬಹಳ ವಿಶದವಾಗಿ ಪದೇ ಪದೇ ಈ ಸಮಸ್ಯೆಗಳನ್ನು ಬಗೆಹರಿಸುತ್ತದೆ. ಎಂದರೆ, ಮನುಷ್ಯನ ಸಹಜ ಶಕ್ತಿಯನ್ನು ಬದಲಾವಣೆ ಮಾಡುವುದು, ತೋಳವನ್ನು ಆಡನ್ನಾಗಿ ಮಾಡಿ ತೋರಿಸುವುದು ಧರ್ಮದ ಕೆಲಸವಲ್ಲ. ಅದು ಶಕ್ತಿಶಾಲಿಯನ್ನು ದುರ್ಬಲಗೊಳಿಸುವುದಿಲ್ಲ. ಬದಲಾಗಿ ಧರ್ಮದ ಗುರಿಯೇನೆಂದರೆ, ಮನುಷ್ಯನೊಳಗೆ ಸಹಜವಾಗಿ ಇರುವ ಶಕ್ತಿಗಳನ್ನು ಮತ್ತು ಸಾಮರ್ಥ್ಯಗಳನ್ನು ಸರಿಯಾದ ಸಮಯ ಮತ್ತು ಸ್ಥಳದಲ್ಲಿ ಉಪಯೋಗಿಸುವ ಮಾರ್ಗದರ್ಶನ ಮಾಡುವುದಾಗಿದೆ. ಸಹಜ ಶಕ್ತಿಯನ್ನು ಬದಲಾಯಿಸಲು ಧರ್ಮಕ್ಕೆ ಅಧಿಕಾರವಿಲ್ಲ. ಬದಲಾಗಿ ಅದನ್ನು ಸಂದರ್ಭಾನುಸಾರ ಉಪಯೋಗಿಸಲು ನಿರ್ದೇಶಿಸುವ ಹಕ್ಕಿದೆ. ಧರ್ಮವು ಕೇವಲ ಒಂದು ಶಕ್ತಿಯ ಮೇಲೆ ಒತ್ತು ಕೊಡಬಾರದು. ಬದಲಾಗಿ ಎಲ್ಲ ಶಕ್ತಿಗಳನ್ನು ಉಪಯೋಗಿಸಲು ಉಪದೇಶಿಸಬೇಕು. ಯಥಾರ್ಥ ಉದ್ದೇಶ ಸುಧಾರಣೆಯಾಗಿದೆ. ಈ ಉದ್ದೇಶ ಯಾವ ರೀತಿಯಲ್ಲಿ ಈಡೇರುವುದಾದರೂ ಅದರ ಪ್ರಯತ್ನ ಮಾಡಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮುಸ್ಲಿಮರು ಪವಿತ್ರ ಖುರ್‌ಆನನ್ನು ಕಿಂಚಿತ್ತೂ ಮನವರಿಕೆ ಮಾಡಿಲ್ಲವೆಂಬುದು ನಿಶ್ಚಯವಾಗಿಯೂ ಸತ್ಯ ಸಂಗತಿಯಾಗಿದೆ. ಆದರೆ ಈಗ ಪವಿತ್ರ ಖುರ್‌ಆನಿನ ಸರಿಯಾದ ಅರ್ಥವನ್ನು ಸ್ಪಷ್ಟಪಡಿಸಲು ಅಲ್ಲಾಹನು ಉದ್ದೇಶಿಸಿರುವನು. ಅಲ್ಲಾಹನು ನನ್ನನ್ನು ಅದಕ್ಕಾಗಿಯೇ ನಿಯೋಜಿಸಿದ್ದಾನೆ. ನಾನು ಅವನ ದಿವ್ಯವಾಣಿಗಳ ಮೂಲಕ ಪವಿತ್ರ ಖುರ್‌ಆನನ್ನು ಮನವರಿಕೆ ಮಾಡುತ್ತೇನೆ. ಪವಿತ್ರ ಖುರ್‌ಆನಿನ ಅಧ್ಯಾಪನೆಗಳು ಆಕ್ಷೇಪಣೀಯವಲ್ಲ. ಅದು ಎಷ್ಟು ವಿವೇಕಪೂರ್ಣವಾಗಿದೆ ಎಂದರೆ, ಯಾವನೇ ತತ್ವಜ್ಞಾನಿಗೂ ಅದರ ಮೇಲೆ ಆಕ್ಷೇಪವೆತ್ತಲು ಸಂದರ್ಭ ಸಿಗುವುದಿಲ್ಲ.

ಪವಿತ್ರ ಖುರ್‌ಆನಿನ ಮಹಿಮೆಯ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಜಮಾಅತ್ತನ್ನು ಹೀಗೆ ಉಪದೇಶಿಸುತ್ತಾರೆ: ಪವಿತ್ರ ಖುರ್‌ಆನ್ ಬಗ್ಗೆ ಚಿಂತನೆ ನಡೆಸಿರಿ. ಅದರಲ್ಲಿ ಒಳಿತು ಮತ್ತು ಕೆಡುಕಿನ ವಿವರಣೆಯಿದೆ ಹಾಗೂ ಭವಿಷ್ಯವಾಣಿಗಳು ಇವೆ. ಆಕ್ಷೇಪಿಸಲು ಸಾಧ್ಯವಿಲ್ಲದ ಧರ್ಮವನ್ನು ಅದು ಮುಂದಿರಿಸುತ್ತದೆ. ಅದರ ತಾಜಾ ಅನುಗ್ರಹಗಳು ಮತ್ತು ಫಲಗಳು ಲಭಿಸುತ್ತಿರುತ್ತವೆ. ಅಲ್ಲಾಹನು ಪ್ರತಿಯೊಂದು ರೋಗದ ಚಿಕಿತ್ಸೆ ಅದರಲ್ಲಿ ಹೇಳಿದ್ದಾನೆ ಮತ್ತು ಎಲ್ಲ ಶಕ್ತಿಗಳ ಪೋಷಣೆಯನ್ನು ಅದರಲ್ಲಿ ಮಾಡಿದ್ದಾನೆ ಎಂಬ ಹಿರಿಮೆ ಪವಿತ್ರ ಖುರ್‌ಆನಿಗೆ ಮಾತ್ರವಿರುವುದಾಗಿದೆ. ಅದರಲ್ಲಿ ತಿಳಿಸಲಾದ ಕೆಡುಕುಗಳಿಂದ ದೂರವಿರುವ ವಿಧಾನವನ್ನು ಕೂಡ ಹೇಳಿಕೊಟ್ಟಿದ್ದಾನೆ. ಆದ್ದರಿಂದ ನೀವು ಪವಿತ್ರ ಖುರ್‌ಆನಿನ ಪಾರಾಯಣ ಮಾಡುತ್ತಾ ಇರಿ, ದುಆ ಮಾಡುತ್ತಾ ಇರಿ ಮತ್ತು ನಿಮ್ಮ ನಡತೆಗಳನ್ನು ಅದರ ಬೋಧನೆಗಳ ಪ್ರಕಾರ ಮಾಡಲು ಪ್ರಯತ್ನಿಸಿರಿ.

ಪವಿತ್ರ ಖುರ್‌ಆನಿನ ಬಗ್ಗೆ ಚಿಂತಿಸುವ ಕಡೆಗೆ ಗಮನ ಸೆಳೆಯುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸಂಪ್ರದಾಯ ಮತ್ತು ನವೀನಾಚಾರಗಳಿಂದ ದೂರವಿರುವುದು ಉತ್ತಮ. ಇದರಿಂದ ಮೆಲ್ಲಮೆಲ್ಲನೆ ಶರೀಅತಿನ ಸ್ವಾಧೀನ ಶುರುವಾಗುತ್ತದೆ. ಜಪಗಳಲ್ಲಿ ಕಳೆಯುವ ಸಮಯವನ್ನು ಪವಿತ್ರ ಖುರ್‌ಆನಿನ ಬಗ್ಗೆ ಚಿಂತಿಸುವುದರಲ್ಲಿ ಖರ್ಚು ಮಾಡುವುದು ಒಳಿತು. (ಹುಝೂರ್ ಹೇಳಿದರು:) ನವೀನಾಚಾರಗಳಿಂದ ನಾವು ರಕ್ಷಣೆ ಪಡೆಯಬೇಕು. ಪವಿತ್ರ ಖುರ್‌ಆನಿನ ತರ್ಜುಮೆ ಮತ್ತು ವ್ಯಾಖ್ಯಾನ ಓದುವುದರ ಕಡೆಗೆ ಹೆಚ್ಚಿನ ಗಮನವಹಿಸಬೇಕು. ಮುಂದಿನ ವಾರ ರಮಝಾನ್ ಕೂಡ ಶುರುವಾಗಲಿದೆ. ಆದ್ದರಿಂದ ಈ ರಮಝಾನಿನಲ್ಲಿ ವಿಶೇಷವಾಗಿ ಪವಿತ್ರ ಖುರ್‌ಆನ್ ಓದಲು, ಓದಿಸಲು ಮತ್ತು ಮನವರಿಕೆ ಮಾಡಲು ಪ್ರಯತ್ನಿಸಬೇಕು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹೃದಯದ ಕಠೋರತೆಯನ್ನು ಮೃದುಗೊಳಿಸಲು ಪವಿತ್ರ ಖುರ್‌ಆನನ್ನು ಪದೇ ಪದೇ ಓದಿರಿ. ದುಆ ಇರುವ ಎಡೆಗಳಲ್ಲಿ, ಅದೇ ದೈವಿಕ ಕೃಪೆ ನನಗೂ ಲಭಿಸಲಿ ಎಂದು ಸತ್ಯವಿಶ್ವಾಸಿಯ ಹೃದಯ ಸಹ ಬಯಸುತ್ತದೆ. ಪವಿತ್ರ ಖುರ್‌ಆನಿನ ಉದಾಹರಣೆ ಒಂದು ಹೂವಿನ ತೋಟದ ಹಾಗೆ ಆಗಿರುತ್ತದೆ. ಒಂದು ಸ್ಥಳದಿಂದ ಒಂದು ವಿಧದ ಹೂವನ್ನು ಆರಿಸಿ ಮತ್ತೆ ಮುಂದಕ್ಕೆ ಹೋಗಿ ಬೇರೆ ವಿಧದ ಹೂವನ್ನು ಆರಿಸಲಾಗುತ್ತದೆ. ಒಟ್ಟಿನಲ್ಲಿ, ಪ್ರತಿಯೊಂದು ಸ್ಥಳದಿಂದ ಸ್ಥಿತಿಗೆ ಅನುಸಾರವಾದ ಪ್ರಯೋಜನವನ್ನು ಪಡೆಯಬೇಕು. ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಪಾಲಿಸುವಾಗ ಮನುಷ್ಯನ ಆಧ್ಯಾತ್ಮಿಕ ಅಭಿವೃದ್ಧಿಯಾಗುತ್ತದೆ. ಅಲ್ಲಾಹನು ನೀಡಿದ ಆದೇಶಗಳನ್ನು ಪಾಲಿಸಬೇಕು ಮತ್ತು ನಿಷೇಧಿಸಿದ ಸಂಗತಿಗಳಿಂದ ತಡೆದು ನಿಲ್ಲಲು ಪ್ರಯತ್ನಿಸಬೇಕು. ಮನುಷ್ಯನು ಈ ತೋಟದಿಂದ ಆರಿಸುವ ಹೂಗಳು ಇವೇ ಆಗಿವೆ.

(ಹಝ್ರೂರ್ ಹೇಳಿದರು:) ಸಹಾಬಿಯರು ಹದೀಸುಗಳಿಗೆ ಪವಿತ್ರ ಖುರ್‌ಆನಿಗಿಂತ ಕಡಿಮೆ ಸ್ಥಾನವನ್ನು ನೀಡುತ್ತಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹದೀಸುಗಳನ್ನು ನಂತರ ಸಂಗ್ರಹಿಸಲಾಗಿದ್ದರೂ ಕೆಲವೊಮ್ಮೆ ಕೆಲವು ಸಹಾಬಿಯರು ಅವುಗಳನ್ನು ಬರೆಯುತ್ತಾ ಸಹ ಇದ್ದರು ಎಂಬುದನ್ನು ನೆನಪಿಡಬೇಕಾಗಿದೆ. ಒಂದು ಬಾರಿ ಹಝ್ರತ್ ಉಮರ್(ರ) ಒಂದು ವಿಷಯಕ್ಕೆ ತೀರ್ಪು ನೀಡುತ್ತಿದ್ದಾಗ, ಹದೀಸಿನಲ್ಲಿ ಹೀಗೆ ಬರೆಯಲಾಗಿದೆ ಎಂದು ಮುದುಕಿಯೊಬ್ಬಳು ಹೇಳಿದರು. ಆದರೆ ಹಝ್ರತ್ ಉಮರ್(ರ) ಹೇಳಿದರು: ಒಬ್ಬಳು ಮುದುಕಿಗಾಗಿ ನಾನು ಪವಿತ್ರ ಖುರ್‌ಆನನ್ನು ಬಿಡಲು ಸಾಧ್ಯವಲ್ಲ. ಒಟ್ಟಿನಲ್ಲಿ ಈ ಒಂದು ರೀತಿಯನ್ನೇ ನಾವು ಪಾಲಿಸಬೇಕಾಗಿದೆ. ಹೀಗೆ ಮಾಡದಿದ್ದರೆ ಬಿದ್‌ಅತ್‌ಗಳು ಹರಡುತ್ತಾ ಹೋಗುವುವು. ಇದೇ ಕಾರಣದಿಂದ ಮುಸ್ಲಿಮರಲ್ಲಿ ನವೀನಾಚಾರಗಳು ಹರಡುತ್ತಿವೆ. ಅವುಗಳು ಪವಿತ್ರ ಖುರ್‌ಆನಿನ ಸರಿಯಾದ ಪಾಠಗಳಿಂದ ದೂರ ಮಾಡುತ್ತವೆ. ಸಾಮಾನ್ಯ ಮುಸ್ಲಿಮರಲ್ಲಿ ಬಹುತೇಕರು ಅಜ್ಞಾನಿಗಳಾಗಿರುತ್ತಾರೆ. ನಾಮಧಾರಿಗಳಾದ ಮುಲ್ಲಾಗಳು ಅವರನ್ನು ಕೊಂಡು ಹೋಗುವಲ್ಲಿಗೆ ಅವರು ಹೋಗುತ್ತಾರೆ ಮತ್ತು ನವೀನಾಚಾರಗಳು ಹರಡುತ್ತಾ ಹೋಗುತ್ತವೆ. ಅಂತಿದ್ದೂ ನಾವು ಪವಿತ್ರ ಖುರ್‌ಆನಿನಲ್ಲಿ ಏರುಪೇರು ಮಾಡುತ್ತೇವೆ ಎಂದು ನಮ್ಮ ಮೇಲೆ ಆರೋಪ ಹೊರಿಸುತ್ತಾರೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಎಲ್ಲಿಯ ವರೆಗೆ ಮುಸ್ಲಿಮರು ಪವಿತ್ರ ಖುರ್‌ಆನನ್ನು ಸಂಪೂರ್ಣವಾಗಿ ಪಾಲಿಸುವುದಿಲ್ಲವೋ ಮತ್ತು ಅನುಸರಿಸುವುದಿಲ್ಲವೋ ಅಲ್ಲಿಯ ವರೆಗೆ ಅವರು ಯಾವುದೇ ವಿಧದ ಪ್ರಗತಿಯನ್ನು ಹೊಂದಲಾರರು. ಪವಿತ್ರ ಖುರ್‌ಆನ್ ರತ್ನಗಳ ಚೀಲವಾಗಿದೆ. ಆದರೆ ಜನರಿಗೆ ಅದರ ಅರಿವಿಲ್ಲ. ದುಃಖಕರವೇನೆಂದರೆ, ಜನರು ಆವೇಶ ಮತ್ತು ಉತ್ಸಾಹದಿಂದ ಪವಿತ್ರ ಖುರ್‌ಆನ್ ಕಡೆಗೆ ಗಮನ ಹರಿಸುವುದಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪವಿತ್ರ ಖುರ್‌ಆನ್ ಪ್ರಮಾಣದ ಒಂದು ರೂಪವನ್ನು ಹೊಂದಿದೆ. ಶಕ್ತವಾದ ಮತ್ತು ಸುದೃಢವಾದ ಪುರಾವೆಯನ್ನು ನೀಡದ ಯಾವುದೇ ಸಂಗತಿಯನ್ನು ಅದು ಪ್ರತಿಪಾದಿಸುವುದಿಲ್ಲ. ಯಾವ ರೀತಿಯಲ್ಲಿ ಪವಿತ್ರ ಖುರ್‌ಆನಿನ ವಾಕ್ಚಾತುರ್ಯ ಮತ್ತು ಭಾಷಾ ಶೈಲಿ ತನ್ನೊಳಗೆ ಒಂದು ಆಕರ್ಷಣೆಯನ್ನು ಹೊಂದಿದೆಯೋ ಯಾವ ರೀತಿಯಲ್ಲಿ ಅದರ ಬೋಧನೆಯಲ್ಲಿ ಯುಕ್ತಿ ಮತ್ತು ಆಕರ್ಷಣೆ ಇದೆಯೋ ಅದೇ ರೀತಿಯಲ್ಲಿ ಅದರ ಪುರಾವೆಗಳು ಪ್ರಭಾವಶಾಲಿಯಾಗಿವೆ. ಆದ್ದರಿಂದ ಬೇರೆ ಯಾವುದೇ ಪುಸ್ತಕಕ್ಕೆ ಪವಿತ್ರ ಖುರ್‌ಆನನ್ನು ಎದುರಿಸಲು ಸಾಧ್ಯವಲ್ಲ. ಪವಿತ್ರ ಖುರ್‌ಆನನ್ನು ಓದುವಾಗ ಮತ್ತು ಪವಿತ್ರ ಖುರ್‌ಆನಿನಲ್ಲಿ ಏನಾದರೂ ಸಂಗತಿಯನ್ನು ನೋಡುವಾಗ ಅಲ್ಲೇ ಅದರ ಪುರಾವೆಯನ್ನು ಸಹ ಹುಡುಕಿರಿ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪವಿತ್ರ ಖುರ್‌ಆನಿನ ಎದುರಿನಿಂದ ಜಾಲವಿದ್ಯೆ ಓಡಿ ಮರೆಯಾಗುತ್ತದೆ. ಅದರ ಮುಂದೆ ಯಾವುದೇ ಸುಳ್ಳು ಮತ್ತು ಜಾದೂ ನಿಲ್ಲಲು ಸಾಧ್ಯವಲ್ಲ. ಪವಿತ್ರ ಖುರ್‌ಆನ್ ಎಂತಹ ಮಹತ್ತಾದ ಆಯುಧವಾಗಿದೆ ಎಂದರೆ, ಅದರ ಮುಂದೆ ಯಾವುದೇ ಸುಳ್ಳಿಗೆ ನಿಲ್ಲಲು ಧೈರ್ಯವೇ ಇರದು. ಇದು ಆಕಾಶೀಯ ಅಸ್ತ್ರವಾಗಿದೆ. ಅದು ಎಂದಿಗೂ ಮೊಂಡಾಗದು. ಒಟ್ಟಿನಲ್ಲಿ, ನಾವು ನಮ್ಮ ಆಧ್ಯಾತ್ಮಿಕ ಮತ್ತು ಅರಿವಿನ ಸ್ಥಿತಿಯನ್ನು ಸಹ ಉತ್ತಮಗೊಳಿಸಲು ಮತ್ತು ವಿರೋಧಿಗಳನ್ನು ಎದುರಿಸಲು ನಾವು ಪವಿತ್ರ ಖುರ್‌ಆನಿನ ಬಗ್ಗೆ ಚಿಂತಿಸುವ ಮತ್ತು ಆಲೋಚಿಸುವ ಕಡೆಗೆ ಹೆಚ್ಚಿನ ಗಮನಹರಿಸಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪವಿತ್ರ ಖುರ್‌ಆನ್ ಸಮುದಾಯಗಳ ಮೈತ್ರಿಗೆ ಬುನಾದಿ ಹಾಕಿದ ಆದರಣೀಯವಾದ ಗ್ರಂಥವಾಗಿದೆ. ಅದು ಪ್ರತಿಯೊಂದು ಸಮುದಾಯದ ಪ್ರವಾದಿಯನ್ನು ಅಂಗೀಕರಿಸಿತು. **ಲಾ ನುಫರ್ರಿಖು ಬೈನ ಅಹದಿಮ್ಮಿನ್‌ಹುಮ್ ವನಹ್‌ನು ಲಹೂ ಮುಸ್ಲಿಮೂನ್** ಎಂಬ ಪಾಠವನ್ನು ನೀಡುವ ಮೂಲಕ ಪೂರ್ತಿ ಲೋಕದಲ್ಲಿ ಪವಿತ್ರ ಖುರ್‌ಆನಿಗೆ ವಿಶೇಷವಾದ ಹಿರಿಮೆಯಿದೆ. ಎಂದರೆ, ಎಲೈ ಮುಸ್ಲಿಮರೇ; ಹೇಳಿರಿ, ನಾವು ಲೋಕದ ಎಲ್ಲ ಪ್ರವಾದಿಗಳನ್ನು ನಂಬುತ್ತೇವೆ, ಕೆಲವರನ್ನು ನಂಬುವ ಮತ್ತು ಕೆಲವರನ್ನು ತಿರಸ್ಕರಿಸುವ ಮೂಲಕ ವ್ಯತ್ಯಾಸವನ್ನು ಮಾಡುವುದಿಲ್ಲ. ಇಂತಹ ಮೈತ್ರಿಯ ಗ್ರಂಥ ಬೇರೆ ಇದ್ದರೆ ಹೇಳಿರಿ ಎಂದು ಹಝ್ರತ್ ಮಸೀಹ್ ಮೌಊದ್(ಅ) ಪಂಥಾಹ್ವಾನ ನೀಡಿರುವರು. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಪವಿತ್ರ ಖುರ್‌ಆನ್ ಎಂತಹ ಗ್ರಂಥವೆಂದರೆ, ಅದನ್ನು ಅನುಸರಿಸುವುದರಿಂದ ಇಹಲೋಕದಲ್ಲೇ ಮೋಕ್ಷದ ಲಕ್ಷಣಗಳು ಪ್ರಕಟವಾಗುತ್ತವೆ. ಇದರ ವಿವರಣೆ ಶೈಲಿ ಎಷ್ಟೊಂದು ಸಂಪೂರ್ಣ, ಸೂಕ್ಷ್ಮ ಮತ್ತು ಸತ್ಯಾಧಾರಿತವಾಗಿದೆ ಎಂದರೆ, ಅಲ್ಲಾಹನನ್ನು ತಲುಪಲು ತಡೆಯಾಗಿ ನಿಲ್ಲುವ ಲೋಕದ ಸಂಶಯಗಳಿಗೆ ವಿವೇಕಯುತವಾದ ಉತ್ತರಗಳು ಅದರಲ್ಲಿ ಇವೆ. ಪವಿತ್ರ ಖುರ್‌ಆನ್ ಸ್ಪಷ್ಟ ಮತ್ತು ಖಚಿತವಾದ ವಚನವಾಗಿದೆ. ಅದು ಸಂಶಯದ ಕೊಳಕುಗಳಿಂದ ಮುಕ್ತವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ಮೊದಲು ಬೇರೆ ಬೇರೆಯಾಗಿ ಪ್ರತಿಯೊಂದು ಸಮುದಾಯಕ್ಕೆ ಬೇರೆ ಬೇರೆ ಮಾರ್ಗಸೂಚಿಗಳನ್ನು ಕಳುಹಿಸಿದನು. ಅನಂತರ ಅಲ್ಲಾಹನು ಏಕನಾಗಿರುವ ಹಾಗೆಯೇ ಮನುಷ್ಯಕುಲ ಸಹ ಒಂದಾಗಬೇಕೆಂದು ಅಲ್ಲಾಹನು ಬಯಸಿದನು. ಆಗ ಎಲ್ಲರನ್ನು ಒಂದುಗೂಡಿಸಲಿಕ್ಕಾಗಿ ಪವಿತ್ರ ಖುರ್‌ಆನನ್ನು ಕಳುಹಿಸಿದನು. ಹಿಂದಿನ ದಿವ್ಯಗ್ರಂಥಗಳ ಮತ್ತು ಪ್ರವಾದಿಗಳ ಮೇಲೆ ಪವಿತ್ರ ಖುರ್‌ಆನ್ ಔದಾರ್ಯ ಮಾಡಿದೆ. ಕಥೆಗಳ ರೂಪದಲ್ಲಿದ್ದ ಅವುಗಳ ಅಧ್ಯಾಪನೆಗಳಿಗೆ ಜ್ಞಾನದ ರೂಪವನ್ನು ನೀಡಿತು. ಪವಿತ್ರ ಖುರ್‌ಆನ್ ಓದದೇ ಯಾವುದೇ ವ್ಯಕ್ತಿ ಈ ಕಥೆಗಳಿಂದ ಮೋಕ್ಷ ಪಡೆಯಲಾರನು. ಯಾರು ಪವಿತ್ರ ಖುರ್‌ಆನನ್ನು ಓದಿ ಅದನ್ನು ಕಥೆಯೆಂದು ಭಾವಿಸುತ್ತಾರೋ ಅವರು ಅದನ್ನು ಅಗೌರವದಿಂದ ಕಂಡಿರುವರು. ಪವಿತ್ರ ಖುರ್‌ಆನ್ ಪೂರ್ಣವಾಗಿಯೂ ಪ್ರಕಾಶ, ಯುಕ್ತಿಪೂರ್ಣ ಮತ್ತು ಜ್ಞಾನವಾಗಿದೆ ಎಂದು ನಾವು ಲೋಕಕ್ಕೆ ತೋರಿಸಲು ಬಯಸುತ್ತಿರುವ ಕಾರಣದಿಂದ ನಮ್ಮ ಎದುರಾಳಿಗಳು ನಮ್ಮನ್ನು ವಿರೋಧಿಸುವುದರಲ್ಲಿ ಕಠಿಣವಾಗಿರುವರು. ಪವಿತ್ರ ಖುರ್‌ಆನ್ ಒಂದು ಜೀವಂತ ಮತ್ತು ಬೆಳಗುವ ಗ್ರಂಥವಾಗಿದೆ ಎಂದು ಅಲ್ಲಾಹನು ತನ್ನ ಕೃಪೆಯಿಂದ ನಮಗೆ ಸ್ಪಷ್ಟವಾಗಿ ತಿಳಿಸಿರುವನು. ಹಾಗಿರುವಾಗ ನಾವು ಅವರ ವಿರೋಧವನ್ನು ಏಕೆ ಗಮನಿಸಬೇಕು?

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಪವಿತ್ರ ಖುರ್‌ಆನಿನಲ್ಲಿ ಎಷ್ಟು ಮಹೋನ್ನತವಾದ ಜ್ಞಾನಗಳು ಇವೆ ಎಂದರೆ, ಅವುಗಳನ್ನು ತೌರಾತ್ ಮತ್ತು ಇಂಜೀಲಿನಲ್ಲಿ ಹುಡುಕುವುದು ವ್ಯರ್ಥ. ಒಟ್ಟಿನಲ್ಲಿ, ಅಲ್ಲಾಹನ ವಚನದ ಸೌಂದರ್ಯದ ಬಗ್ಗೆ ಗೊತ್ತಾಗಲಿಕ್ಕಾಗಿ ಅದರ ಅರ್ಥ ಮತ್ತು ತಾತ್ಪರ್ಯದ ಬಗ್ಗೆ ಚಿಂತಿಸುವ ಅಭ್ಯಾಸವನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಪವಿತ್ರ ಖುರ್‌ಆನಿನಲ್ಲಿ ಆರಂಭದಿಂದ ಕೊನೆಯ ತನಕ ಆದೇಶಗಳ ವಿವರಣೆಯಿದೆ. ಪಾರಾಯಣ ಮಾಡುವಾಗ ಅವುಗಳನ್ನು ಹುಡುಕಬೇಕು ಮತ್ತು ಅವುಗಳನ್ನು ಜೀವನದ ಭಾಗವನ್ನಾಗಿ ಮಾಡಬೇಕು. ಆಗಲೇ ನಾವು ಅಲ್ಲಾಹನ ವಚನದಿಂದ ನಿಜವಾದ ಪ್ರಯೋಜನವನ್ನು ಪಡೆಯಬಹುದಾಗಿದೆ. ಪವಿತ್ರ ಖುರ್‌ಆನಿನಲ್ಲಿ ಎಲ್ಲವೂ ಇದೆ. ಆದರೆ ಎಲ್ಲಿಯ ವರೆಗೆ ಅದನ್ನು ಕಾಣುವ ಕಣ್ಣಿನ್ನಲ್ಲವೋ ಅಲ್ಲಿಯ ವರೆಗೆ ಏನೂ ಗಳಿಸಲು ಸಾಧ್ಯವಲ್ಲ. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಪವಿತ್ರ ಖುರ್‌ಆನ್ ಜ್ಞಾನದ ಭಂಡಾರವಾಗಿದೆ. ಲೋಕದ ಅನುಗ್ರಹಗಳು ಕೂಡ ಇದರ ಜೊತೆಗೆ ಬರುತ್ತವೆ. ಅಲ್ಲಾಹನು ಅದಕ್ಕಾಗಿಯೇ ಪ್ರವಾದಿಗಳನ್ನು ಕಳುಹಿಸಿದನು. ತನ್ನ ಕೊನೆಯ ಗ್ರಂಥವನ್ನು ಅವತೀರ್ಣಗೊಳಿಸಿದನು. ಅದರ ಪ್ರಭಾವಗಳನ್ನು ಮನವರಿಕೆ ಮಾಡಿಕೊಂಡು ರಕ್ಷಣೆ ಪಡೆಯಲಿಕ್ಕಾಗಿ.

ಒಟ್ಟಿನಲ್ಲಿ ಪ್ರತಿಯೊಬ್ಬ ಅಹ್ಮದಿಯು ಪವಿತ್ರ ಖುರ್‌ಆನಿನ ಅಧ್ಯಾಪನೆಯ ಪ್ರಕಾರ ತಮ್ಮ ಸ್ಥಿತಿಗಳನ್ನು ಮಾಡಲು ಪ್ರಯತ್ನಿಸುವುದರೊಂದಿಗೆ ಲೋಕಕ್ಕೂ ಆ ಅಧ್ಯಾಪನೆಯನ್ನು ತಿಳಿಸಬೇಕು ಮತ್ತು ಅವರನ್ನು ಆಧ್ಯಾತ್ಮಿಕ ಮತ್ತು ಭೌತಿಕ ನಾಶದಿಂದ ರಕ್ಷಿಸಬೇಕು. ಹಝ್ರತ್ ಪೈಗಂಬರ್[ಸ] **ಖಾತಮುನ್ನಬಿಯ್ಯೀನ್** ಆಗಿರುವರು ಮತ್ತು ಪವಿತ್ರ ಖುರ್‌ಆನ್ **ಖಾತಮುಲ್ ಕುತುಬ್** ಆಗಿದೆ. ಹಝ್ರತ್ ಪೈಗಂಬರ್[ಸ] ಮಾಡಿ ತೋರಿಸಿದ್ದು ಮತ್ತು ಪವಿತ್ರ ಖುರ್‌ಆನ್ ಕಲಿಸಿದ್ದನ್ನು ಬಿಟ್ಟುಕೊಂಡು ಮೋಕ್ಷ ಲಭಿಸಲು ಸಾಧ್ಯವಲ್ಲ. ಇದು ನಮ್ಮ ಧರ್ಮ ಮತ್ತು ವಿಶ್ವಾಸವಾಗಿದೆ. ಈ ಸಂಗತಿ ಸಾಮಾನ್ಯ ಮುಸ್ಲಿಮರು ಕೂಡ ಮನವರಿಕೆ ಮಾಡಿದರೆ ಮತ್ತು ಕಾಲಘಟ್ಟದ ಇಮಾಮನ್ನು ಗುರುತಿಸುವುದಾದರೆ ಎಷ್ಟು ಚೆನ್ನ!.

(ಖುತ್ಬದ ಕೊನೆಯಲ್ಲಿ ಹುಝೂರ್ ಪಾಕಿಸ್ತಾನ, ಬುರ್ಕಿನಾಫಾಸೋ ಮತ್ತು ಬಾಂಗ್ಲಾದೇಶದ ಅಹ್ಮದಿಯರಿಗಾಗಿ ದುಆ ಮಾಡಲು ಪುನಃ ಹೇಳಿದರು. ಹುಝೂರ್ ಹೇಳಿದರು:) ಪಾಕಿಸ್ತಾನದ ಅಹ್ಮದಿಯರಿಗಾಗಿ ಮತ್ತು ದೇಶದ ಸಾಮಾನ್ಯ ಸ್ಥಿತಿಗತಿಗಳಿಗಾಗಿ ದುಆ ಮಾಡಿರಿ. ಬುರ್ಕಿನಾಫಾಸೋದ ಅಹ್ಮದಿಯರಿಗಾಗಿ ಮತ್ತು ದೇಶದ ಸಾಮಾನ್ಯ ಸ್ಥಿತಿಗತಿಗಳಿಗಾಗಿ ದುಆ ಮಾಡಿರಿ. ಬಾಂಗ್ಲಾದೇಶದ ಅಹ್ಮದಿಯರಿಗಾಗಿ ದುಆ ಮಾಡಿರಿ. ಅಲ್ಲಾಹನು ಅವರನ್ನು ಕೂಡ ಸಂರಕ್ಷಿಸಲಿ. ಅಲ್ಲಿ ಇಂದು ಪುನಃ ಮೌಲವಿಗಳು ದಂಗೆ ಎಬ್ಬಿಸಲು ಪ್ರಯತ್ನಿಸಿದ್ದರು. ಅಹ್ಮದಿಯರು ಇರುವ ಪ್ರತಿಯೊಂದು ದೇಶಕ್ಕಾಗಿ ದುಆ ಮಾಡಿರಿ.

(ರಮಝಾನಿಗೆ ಸಂಬಂಧಪಟ್ಟು ದುಆಗಳ ಕಡೆಗೆ ವಿಶೇಷವಾಗಿ ಗಮನ ಸೆಳೆಯುತ್ತಾ ಹುಝೂರ್ ಹೇಳಿದರು:) ರಮಝಾನ್ ಸಹ ಈಗ ಆರಂಭವಾಗಲಿದೆ. ನಾನು ಹೇಳಿದಂತೆ, ಈ ತಿಂಗಳಲ್ಲಿ ವಿಶೇಷವಾಗಿ ಪವಿತ್ರ ಖುರ್‌ಆನ್ ಓದುವ ಮತ್ತು ಮನವರಿಕೆ ಮಾಡುವ ಕಡೆಗೆ ಗಮನ ನೀಡುವುದರೊಂದಿಗೆ ದುಆದ ಕಡೆಗೆ ವಿಶೇಷವಾದ ಗಮನ ನೀಡಿರಿ. ಅಲ್ಲಾಹನು ನಮಗೆಲ್ಲರಿಗೂ ಅದರ ಸೌಭಾಗ್ಯ ನೀಡಲಿ. ರಮಝಾನಿನ ಅನುಗ್ರಹದಿಂದ ಪ್ರಯೋಜನ ಪಡೆಯಲು ಸೌಭಾಗ್ಯ ನೀಡಲಿ. ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)

*At,* ***'Masjid Mubarak',*** *Islamabad, Tilford, UK, on 17-03-2023*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian



***Email****:* *khutuba.kannada@gmail.com*



**You can find all the Sermons archived at**: www.alislam.org/friday-sermon